# Telephone Conversation between Prime Minister Shri Narendra Modi and H.E. Boris Johnson, Prime Minister of the United Kingdom

## March 12, 2020

---

## ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಮತ್ತು ಯುನೈಟೆಡ್ ಕಿಂಗ್‌ಡಂನ ಪ್ರಧಾನ ಮಂತ್ರಿ ಹೆಚ್.ಇ. ಬೋರಿಸ್ ಜಾನ್ಸನ್ ನಡುವಿನ ದೂರವಾಣಿ ಸಂಭಾಷಣೆ

## ಮಾರ್ಚ್ 12, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ಇಂದು ಯುನೈಟೆಡ್ ಕಿಂಗ್‌ಡಂನ ಪ್ರಧಾನ ಮಂತ್ರಿ ಹೆಚ್. ಇ. ಬೋರಿಸ್ ಜಾನ್ಸನ್ ಅವರಿಂದ ದೂರವಾಣಿ ಕರೆ ಬಂದಿದೆ.

ಹೊಸ ದಶಕದಲ್ಲಿ ಭಾರತ-ಯುಕೆ ಕಾರ್ಯತಂತ್ರದ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸುವ ಇಚ್ಛೆಯನ್ನು ಇಬ್ಬರು ನಾಯಕರು ವ್ಯಕ್ತಪಡಿಸಿದರು. ಈ ಉದ್ದೇಶದ ಕಡೆಗೆ ಸಮಗ್ರ ಮಾರ್ಗಸೂಚಿಯನ್ನು ರೂಪಿಸುವುದು ಉಪಯುಕ್ತ ಎಂದು ಅವರು ಒಪ್ಪಿಕೊಂಡರು.

ಹವಾಮಾನ ಬದಲಾವಣೆಯ ಕ್ಷೇತ್ರದಲ್ಲಿ ವಿಶೇಷವಾಗಿ ವಿಪತ್ತು ಸ್ಥಿತಿಸ್ಥಾಪಕ ಮೂಲಸೌಕರ್ಯಕ್ಕಾಗಿ ಒಕ್ಕೂಟ (ಸಿಡಿಆರ್ ಐ) ವನ್ನು ಉಲ್ಲೇಖಿಸಿ ಭಾರತ ಮತ್ತು ಯುಕೆ ನಡುವಿನ ಸಹಕಾರದ ಬಗ್ಗೆ ನಾಯಕರು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದರು. ಈ ವರ್ಷದ ಕೊನೆಯಲ್ಲಿ ಗ್ಲಾಸ್ಗೋದಲ್ಲಿ ಸಿಒಪಿ - 26 ಗೆ ಆಹ್ವಾನಿಸಿದ್ದಕ್ಕಾಗಿ ಪ್ರಧಾನಿ ಮಂತ್ರಿ ಮೋದಿಯವರು ಪ್ರಧಾನ ಮಂತ್ರಿ ಜಾನ್ಸನ್‌ಗೆ ಧನ್ಯವಾದ ಅರ್ಪಿಸಿದರು.

ಇಬ್ಬರು ಪ್ರಧಾನ ಮಂತ್ರಿಗಳು ಕೋವಿಡ್-19 ಸಾಂಕ್ರಾಮಿಕದ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಕೊರೋನವೈರಸ್ ಧನಾತ್ಮಕ ಪರೀಕ್ಷೆಗಾಗಿ ಯುಕೆ ಆರೋಗ್ಯ ಮಂತ್ರಿ ಮಿಸ್. ನಾಡಿನ್ ಡೋರಿಸ್ ರವರಿಗೆ ಪ್ರಧಾನ ಮಂತ್ರಿ ಶ್ರೀ ಮೋದಿರವರು ಕಾಳಜಿಯನ್ನು ವ್ಯಕ್ತಪಡಿಸಿದರು ಹಾಗೂ ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಹಾರೈಸಿದರು.

ಪ್ರಧಾನ ಮಂತ್ರಿ ಮೋದಿಯವರು ಪರಸ್ಪರ ಅನುಕೂಲಕರ ದಿನಾಂಕಗಳಲ್ಲಿ ಭಾರತಕ್ಕೆ ಭೇಟಿ ನೀಡುವಂತೆ ಶ್ರೀ ಜಾನ್ಸನ್ ರವರಿಗೆ ಪುನಃ ಆಹ್ವಾನವನ್ನು ನೀಡಿದರು.

**ನವ ದೆಹಲಿ**
**ಮಾರ್ಚ್ 12, 2020**

DISCLAIMER : This is an approximate translation. The original is available in English on MEA's website and may be referred to as the official press release.